ಮಾಡಿರುತ್ತೆ. ಕಾರ್ಖಾನೆಯ ಸ್ಥಾಪನೆಗೆ ಇನ್ನೂ ಹಣದ ಅವಶ್ಯಕತೆ ಇದ್ದು ಉನ್ನತ ಮಟ್ಟದ ಹಣಕಾಸು ಸಂಸ್ಥೆಗಳಿಂದ ಒಟ್ಟು ೫೪೦–೦೦ ಲಕ್ಷ ರೂ.ಗಳ ಸಾಲವನ್ನು ಪಡೆಯಲು ಕಾರ್ಖಾನೆ ಪ್ರಸ್ತಾಪಿಸಿದೆ. ಅಲ್ಲದೆ ಈ ಕಾರ್ಖಾನೆಗೆ ಕೇಂದ್ರ ಸರ್ಕಾರದವರು ನೀಡಿದ ಕೈಗಾರಿಕಾ ಪರವಾನಗಿಯ ಅವಧಿ ಡಿಸೆಂಬರ್ ೮೭ಕ್ಕೆ ಮುಗಿದಿದ್ದು, ಸದರಿ ಅವಧಿಯನ್ನು ವಿಸ್ತರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಕೇಂದ್ರ ಸರ್ಕಾರದ ತೀರ್ಮಾನ ಇನ್ನೂ ಬಂದಿರುವುದಿಲ್ಲ.

ಈ) ಕಾರ್ಖಾನೆಯ ಸ್ಥಾಪನೆಗಾಗಿ ೧೭೬.೩ ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ.

ಉ) ವಿಜಾಪುರ ಜಿಲ್ಲೆಯಲ್ಲಿ ಸಧ್ಯಕ್ಕೆ ಗೋದಾವರಿ ಸಕ್ಕರೆ ಕಾರ್ಖಾನೆಯೊಂದು ಮಾತ್ರ ಇದೆ. ಸದರಿ ಕಾರ್ಖಾನೆಗೆ ಸುಮಾರು ೨ ಲಕ್ಷ ಮೆ. ಟನ್ ಕಬ್ಬಿನ ಅವಶ್ಯಕತೆ ಇದ್ದು ವಿಜಾಪುರ ಜಿಲ್ಲೆಯಿಂದ ಮಹಾರಾಷ್ಟ್ರಕ್ಕೆ ಸುಮಾರು ೯ರಿಂದ ೧೦ ಲಕ್ಷ ಮೆ. ಟನ್‌ಗಳಷ್ಟು ಕಬ್ಬು ರವಾನೆಯಾಗುತ್ತಿದೆ.

ವಿದ್ಯಾರ್ಥಿನಿಲಯಗಳಿಗೆ ಧನಸಹಾಯ ಕುರಿತು

೧೫೪೧. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇದುವರೆವಿಗೂ ೧೯೮೭ ಮತ್ತು ೧೯೮೮ನೇ ಸಾಲಿನಲ್ಲಿ ಯಾವುದೇ ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಧನಸಹಾಯ ಮಾಡಬಾರದೆಂದು ಇಲಾಖೆಯ ನಿರ್ದೇಶಕರು ಜಿಲ್ಲಾ ಪರಿಷತ್ತುಗಳಿಗೆ ನಿರ್ದೇಶನ ನೀಡಿದ್ದು ನಿಜವೇ?

ಆ) ಹಾಗಿದ್ದಲ್ಲಿ, ಇದು ಗ್ರಾಮಾಂತರ ಶಿಕ್ಷಣ ಸಂಸ್ಥೆಗಳಿಗೆ ಘಾತಕವಾಗುವುದಿಲ್ಲವೇ?

ಇ) ಈ ಆಜ್ಞೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸರ್ಕಾರವು ಮರು ಆಲೋಚನೆ ಮಾಡುವುದೇ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಇಲ್ಲ,

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಹಕಾರಿ ಸಕ್ಕರೆ ಕಾರ್ಖಾನೆ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳುವುದು

೧೫೦೩. ಶ್ರೀಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಕೈಗಾರಿಕಾ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾನಿಯಲ್ಲಿ ಇಲ್ಲದೇ ಇರುವ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸರ್ಕಾರದ ಆಡಳಿತಕ್ಕೆ ತೆಗೆದುಕೊಂಡಿರುವುದಕ್ಕೆ ಕಾರಣವೇನು?

ಆ) ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಮಾರುವುದಕ್ಕೆ ಬದಲು ರಾಜ್ಯ ಮಟ್ಟದಲ್ಲಿ ತಾಂತ್ರಿಕ ಆಡಳಿತಗಾರರನ್ನು ನೇಮಕಾತಿ ಮಾಡಿ ಸರ್ಕಾರದಿಂದಲೇ ನಡೆಸುವುದಕ್ಕೆ ಇರುವ ತೊಂದರೆಗಳೇನು?

ಇ) ರಾಜ್ಯ ಮಟ್ಟದಲ್ಲಿ ಸಕ್ಕರೆ ಮಹಾಮಂಡಳದ ಕೆಲಸವೇನು?

ಈ) ಎಷ್ಟು ಕಾರ್ಖಾನೆಗಳನ್ನು ಸರ್ಕಾರವು ತನ್ನ ವಶಕ್ಕೆ ತೆಗೆದುಕೊಳ್ಳಲಿದೆ?

ಶ್ರೀ ಜೆ. ಎಚ್. ಪಟೀಲ್(ಮಾನ್ಯ ಕೈಗಾರಿಕಾ ಸಹಕಾರ ಸಚಿವರು)

ಅ) ಇಂತಹ ಪ್ರಕರಣ ಯಾವುದೂ ನಡೆದಿರುವುದಿಲ್ಲ.